ಶಕುಂತಲಾ ತೊಡಗಲು ಪ್ರೇರಣೆ ಆಗಿದ್ದೂ ಪತಿ ಸಂಜೀವ ಅವರೇ. 1987ರಲ್ಲಿ 'ಸಮಗ್ರ ಗ್ರಾಮೀಣ ಆಶ್ರಮ' ತನ್ನ ಚಟುವಟಿಕೆಯನ್ನು ಪೆರ್ನಾಲ್ ಎಂಬಲ್ಲಿ ಆರಂಭಿಸಿತು. ಸಂಜೀವ ಅವರು ಉತ್ಸಾಹದಿಂದ ಚಳವಳಿಯಲ್ಲಿ ಭಾಗವಹಿಸಿದರು. ಮನೆಯಲ್ಲಿ ಹೋರಾಟದ ಮಾತುಕತೆ ಆಗಾಗ ನಡೆಯುತ್ತಲೇ ಇತ್ತು. ಅದನ್ನೆಲ್ಲ ಕೇಳಿಸಿಕೊಳ್ಳುತ್ತಿದ್ದ ಶಕುಂತಲಾ ಪ್ರೇರೇಪಿತರಾಗಿ, ನಿಧಾನಕ್ಕೆ ಸಂಘಟನೆಯಲ್ಲಿ ಗುರುತಿಸಿಕೊಂಡರು. 1993ರ ನಂತರ ಪೂರ್ಣಪ್ರಮಾಣದಲ್ಲಿ ತೊಡಗಿಕೊಂಡರು.

ಅವಿಭಜಿತ ದಕ್ಷಿಣ ಕನ್ನಡ, ಶಿವಮೊಗ್ಗ, ಉತ್ತರ ಕನ್ನಡ ಮತ್ತು ಕೇರಳದ ಕಾಸರಗೋಡು ಜಿಲ್ಲೆಯ ಮಲೆಯ ಪರ್ವತಗಳಲ್ಲಿ ಈ ಸಮುದಾಯ ಚದುರಿದೆ. ಬಿದಿರು ಹಾಗೂ ಧೂಪದ ಮರಗಳ ಬಿಳಲನ್ನು ಸಂಗ್ರಹಿಸಿ ಬುಟ್ಟಿ, ಶಿಬ್ಬಲು, ಗೆರಸಿಯಂತಹ ಗೃಹೋಪಯೋಗಿ ವಸ್ತು ಹೆಣೆಯುವ ವೃತ್ತಿ ಅವರದು. ಅದಕ್ಕೆ ಕಾಡಿನ ಉತ್ಪನ್ನವೇ ಆಧಾರ ಆಗಿದ್ದರಿಂದ ಅರಣ್ಯದಂಚಿನಲ್ಲಿ ಈ ಆದಿವಾಸಿಗರು ನೆಲೆಸಿದ್ದಾರೆ. ಅರಣ್ಯ ಕಾಯ್ದೆಯ ಕಾರಣಕ್ಕೆ ಮೂಲ ವೃತ್ತಿ ಕ್ಷೀಣಿಸಿದೆ. ಅವರ ಸಮುದಾಯದ ವ್ಯಾಪ್ತಿಯಲ್ಲಿ 'ಸಮಗ್ರ ಗ್ರಾಮೀಣ ಆಶ್ರಮ' ಜಾಗೃತಿ ಕಾರ್ಯಕ್ರಮಗಳನ್ನು ಮಾಡುತ್ತಿದೆ.

'ಸಮಗ್ರ ಗ್ರಾಮೀಣ ಆಶ್ರಮ'ದ ಅಧ್ಯಕ್ಷೆಯಾಗಿ ಶಕುಂತಲಾ ಕೊರಗ ನೇಜಾರ ಕಳೆದ ಏಳು ತಿಂಗಳ ಹಿಂದೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಮುದಾಯವು ಸಂಘಟನೆಯನ್ನು ಪ್ರಜಾತ್ರಾತ್ಮಕವಾಗಿ ನಡೆಸುತ್ತಿದ್ದು, ಪ್ರತಿ ಎರಡು ವರ್ಷಗಳಿಗೊಮ್ಮೆ ಅಧ್ಯಕ್ಷರನ್ನು ಆಯ್ಕೆ ಮಾಡುತ್ತದೆ. ಕಳೆದ ಆರು ವರ್ಷದಿಂದ ಈ ಸ್ಥಾನವನ್ನು ಮಹಿಳೆಯರೇ ಅಲಂಕರಿಸುತ್ತಿರುವುದು ವಿಶೇಷ.

## ಚಳವಳಿಯ ಬೀಜ ಬಿತ್ತಿದವರು

ಕೊರಗರಲ್ಲಿ ಸ್ವಾಭಿಮಾನದ ಕನಸಿನ ಬೀಜವನ್ನು ಬಿತ್ತಿದವರು ದೇವದಾಸ್ ಶೆಟ್ಟರು. ಅವರು ಮೈಸೂರು ಜಿಲ್ಲೆಯಲ್ಲಿ ಜನಪರ ಕಾಳಜಿಯಿಂದ ಚಳವಳಿಯಲ್ಲಿ ತೊಡಗಿದ್ದರು. ತಮ್ಮ ತವರಿನಲ್ಲಿಯೇ ನಾಗರಿಕ ಸಮಾಜದಿಂದ ದೂರ ಉಳಿದ ಅಸ್ಪೃಶ್ಯ ಬುಡಕಟ್ಟು ಸಮುದಾಯದ ಬಗ್ಗೆ ಅವರ ಗಮನಹರಿಯಿತು. 'ಮೂರ್ನಾಲ್ಕು ಮಂದಿಯನ್ನು ಜತೆಗೂಡಿ ಕೊರಗರ ಮನೆ ಮನೆಗೆ ಹೋದರು. ಒಂದು ವರ್ಷ ಮನೆ ಮನೆ ಸುತ್ತಿದರೂ ಶೆಟ್ಟರ ಬಗ್ಗೆ ನನ್ನನ್ನೂ ಸೇರಿದಂತೆ ಸಮುದಾಯದ ಜನರಿಗೆ ವಿಶ್ವಾಸವೇ ಬರಲಿಲ್ಲ' ಎನ್ನುತ್ತಾರೆ ಸಂಜೀವ. ಸತತ ಪ್ರಯತ್ನದಿಂದ ಶೆಟ್ಟರ ಪ್ರಯತ್ನ ಫಲಿಸಿ, ಸಮುದಾಯದ ಕೆಲಸದಲ್ಲಿ ಸಂಜೀವರೊಂದಿಗೆ ಅನೇಕರು ಸೇರಿಕೊಂಡರು.



ಸಂಜೀವ

## ನೆಲದಾಶಯದ ಮೂಲ ಸೆಲೆ

ಕೇಂದ್ರ ಸರ್ಕಾರದ ನಿರ್ದೇಶನದಂತೆ ಮಂಗಳೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ಅಧ್ಯಾಪಕ ಡಾ. ಮಹಮದ್ ಪೀರ್ ಅವರ ಅಧ್ಯಕ್ಷತೆಯಲ್ಲಿ ರಚನೆಯಾದ ಸಮಿತಿ, 'ಕೊರಗರ ಕುರಿತ ಅಧ್ಯಯನ ವರದಿ'ಯನ್ನು 1994ರಲ್ಲಿ ಸರ್ಕಾರಕ್ಕೆ ಸಲ್ಲಿಸಿತ್ತು. ಕೊರಗ ಸಮುದಾಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಆ ಬುಡಕಟ್ಟು ಸಮುದಾಯವನ್ನು ಕೃಷಿಕರನ್ನಾಗಿ ಮಾಡಬೇಕು, ಭೂಹೀನರಾದ ಅವರ ಕುಟುಂಬಕ್ಕೆ ಎರಡು ಎಕರೆ ಜಮೀನು ನೀಡಬೇಕು ಎಂಬ ಶಿಫಾರಸುಗಳು ವರದಿಯಲ್ಲಿದ್ದವು. ಸಾಮಾಜಿಕ ನಿರ್ಬಂಧಗಳಿಂದಾಗಿ ನಾಗರಿಕ ಸಮಾಜದಿಂದ ದೂರ ಇರುವ ಅವರು ಅನೇಕ ಮೌಢ್ಯಾಚರಣೆಗಳಿಗೆ ತುತ್ತಾಗುತ್ತಿರುವುದನ್ನೂ ವರದಿ ಪ್ರಸ್ತಾಪಿಸಿತ್ತು. ವರದಿಯ ಶಿಫಾರಸ್ಸಿನ ಅನುಷ್ಠಾನಕ್ಕೆ ವೇದಿಕೆಯನ್ನು ರೂಪಿಸಿದ್ದರ ಪರಿಣಾಮ ಸ್ವಾಭಿಮಾನದ ಬದುಕು ಈಗ ಸಾಧ್ಯವಾಗುತ್ತಿದೆ. ಸರ್ಕಾರದ ನೆರವು ಸಿಗದೇ ಇದ್ದರೆ ಈಗಲೂ ಕೂಲಿ ಕೆಲಸ ಇಲ್ಲವೇ ಮೌಢ್ಯದ ಕೂಪದಲ್ಲಿಯೇ ಮುಳುಗಬೇಕಿತ್ತು ಎಂದು ಸಂಜೀವ ಮತ್ತು ಶಕುಂತಲಾ ದಂಪತಿ ದನಿಗೂಡಿಸುತ್ತಾರೆ.

'ಈ ವರದಿಯನ್ನೇ ಆಧಾರವಾಗಿಟ್ಟುಕೊಂಡು ನಮ್ಮ ಚಳವಳಿ ರೂಪುಗೊಂಡಿತು. ಕಂದಾಯ ಇಲಾಖೆಯಿಂದ ಸಮರ್ಪಕ ಸ್ಪಂದನ ಸಿಗದ ಕಾರಣಕ್ಕೆ ಜಾಥಾ ಅನಿವಾರ್ಯವಾಯಿತು. ಬೈಂದೂರಿನಿಂದ ಕಾಸರಗೋಡಿನ ತನಕ ಪಾದಯಾತ್ರೆಯನ್ನು ಕೈಗೊಂಡೆವು. ಅದರ ನೇತೃತ್ವವನ್ನು ಅಂಚೆ ಇಲಾಖೆಯ ನಿವೃತ್ತ ಅಧಿಕಾರಿ ಗೋಕುಲ್ ದಾಸ್ ವಹಿಸಿದ್ದರು. ಆ ಮೂಲಕ ಸರ್ಕಾರದ ಗಮನ ಸೆಳೆದೆವು. ಅದಾದ ನಂತರ ಕಂದಾಯ ಇಲಾಖೆ, ಅರಣ್ಯ ಇಲಾಖೆ, ಬುಡಕಟ್ಟು ಇಲಾಖೆ, ಕೊರಗ ಸಮುದಾಯದ ಪ್ರಮುಖರು ಸೇರಿ ಭೂಮಾಪನ ಮಾಡಿ ನಾಲ್ಕು ಸಾವಿರ ಎಕರೆ ಸರ್ಕಾರಿ ಜಮೀನನ್ನು ಗುರ್ತಿಸಿದ್ದೇವೆ. ಸರ್ಕಾರ ನಮ್ಮ ಸಮುದಾಯಕ್ಕೆ 600 ಎಕರೆ ಭೂಮಿಯನ್ನು ಹಂಚಿದೆ. ಕುಟುಂಬವೊಂದಕ್ಕೆ ಒಂದು, ಒಂದೂವರೆ ಎಕರೆಯಂತೆ ಸುಮಾರು 400 ಕುಟುಂಬಗಳಿಗೆ ಭೂಮಿ ದೊರೆತಿದೆ. ರಾಜ್ಯದ ಬೇರೆ ಬೇರೆ ಸ್ಥಳಗಳಲ್ಲಿ ಸೋಲಿಗ, ಜೇನು ಕುರುಬ, ಕಾಡು ಕುರುಬ, ಮಲೆಕುಡಿಯ ಕುಡಿಯ, ಕೊರಗ, ಸಿದ್ದಿ, ಯರವ, ಗೌಡಲು, ಹಸಲರು, ಇರುಳಿಗ ಬುಡಕಟ್ಟಿನ ಸಮುದಾಯ ಇವೆ. ಅವರಿಗೆಲ್ಲ ಸೇರಿ 50 ಸಾವಿರ ಎಕರೆ ಭೂಮಿ ದಕ್ಕಿದೆ. ಹಾಗೆಂದು ಬುಡಕಟ್ಟಿನ ಎಲ್ಲ ಕುಟುಂಬಗಳಿಗೂ ಭೂಮಿ ಸಿಕ್ಕಿದೆ ಎಂದಲ್ಲ. ಸೌಲಭ್ಯ ವಂಚಿತರು ತಮ್ಮ ಹಿಂದಿನ ಕೆಲಸಗಳನ್ನೇ ಮುಂದುವರಿಸಿಕೊಂಡು ಹೋಗುವವರೂ ಇದ್ದಾರೆ' ಎಂದು ಸಂಜೀವ ಹೇಳುತ್ತಾರೆ.



ಪೌಷ್ಟಿಕ ಆಹಾರ ಧಾನ್ಯ ಹಿಡಿದಿರುವ ಕುಟುಂಬ